ಮೊದಲಾದ ಹಲವಾರು ಕಾರ್ಯಕ್ರಮಗಳು ಮಾಡಲ್ಪಡುತ್ತಿವೆ. ಆದ್ದರಿಂದ ನಿಗದಿತ ಅಂದಾಜು ಮಾಡಲು ಕಷ್ಟಸಾಧ್ಯ.

ಉ) ಇದಕ್ಕೆಂದು ಯಾವುದೇ ಹಣ ಮಂಜೂರು ಮಾಡಿರುವುದಿಲ್ಲ.

ಚುನಾವಣಾ ಪ್ರಸ್ತಾವ

ಶ್ರೀ ಎಂ.ಪಿ. ಪ್ರಕಾಶ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ), ಅಧ್ಯಕ್ಷರೇ, ಪ್ರಸ್ತಾವ ಏನೆಂದರೆ, "1965ನೇ ಇಸವಿಯ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ನಿಯಮ 3(2)(ಬಿ)ರ ಪ್ರಕಾರ ಈ ಸಭೆ ರಾಜ್ಯ ಗ್ರಂಥಾಲಯ ಪ್ರಾಧಿಕಾರ ಸಮಿತಿಗೆ ನಾಲ್ಕು ಜನ ಸದಸ್ಯರನ್ನು ಚುನಾಯಿಸುವುದು."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1965ನೇ ಇಸವಿಯ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ನಿಯಮ 3(2)(ಬಿ)ರ ಪ್ರಕಾರ ಈ ಸಭೆ ರಾಜ್ಯ ಗ್ರಂಥಾಲಯ ಪ್ರಾಧಿಕಾರ ಸಮಿತಿಗೆ ನಾಲ್ಕು ಜನ ಸದಸ್ಯರನ್ನು ಚುನಾಯಿಸುವುದು."

(ಪ್ರಸ್ತಾಪ ಅಂಗೀಕೃತವಾಯಿತು)

ಅಧ್ಯಕ್ಷರು : ಶ್ರೀ ಹೆಚ್. ಶಿವಪ್ಪನವರು ನಿಯಮ 191ರ ಕೆಳಗೆ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ನಿನ್ನೆ ಇನ್ನೊಂದು ಸೂಚನೆಯನ್ನು ನಾವು ಕೈಗೆ ಎತ್ತಿಕೊಂಡು ಅದು ಸದನದ ಮುಂದೆ ಇತ್ಯರ್ಥವಾಗದೆ ಹಾಗೆ ಉಳಿದಿರುವುದರಿಂದ ಈ ಸೂಚನೆ ಇತ್ಯರ್ಥವಾದ ಮೇಲೆ ತಾವು ಕೊಟ್ಟಿರುವಂಥ ಸೂಚನೆಯನ್ನು ಕೈಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ಶಿವಪ್ಪ : ತಾವು ಸೂಚನೆ ಏನು ಎಂದು ತಿಳಿಯಬಹುದೇ?

ಅಧ್ಯಕ್ಷರು : ಈಗಾಗಲೇ, ಒಂದು ಸೂಚನೆ ಸದನದ ಮುಂದೆ ಇದೆ. ಅದು ಸದನದಲ್ಲಿ ಇತ್ಯರ್ಥವಾಗದ ಹೊರತು ಮತ್ತೊಂದು ಸೂಚನೆಯನ್ನು ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ.ನಿಮ್ಮ ಸೂಚನೆ ನಮ್ಮ ಕಛೇರಿ ತಲುಪಿದೆ. ಇದು ಇತ್ಯರ್ಥವಾದ ನಂತರ ಅದನ್ನು ತೆಗೆದುಕೊಳ್ಳೋಣ. ಈಗ ಅದರ ಅಗತ್ಯವಿಲ್ಲ, ದಯಮಾಡಿ ಅದನ್ನು ಅಲ್ಲಿಗೆ ನಿಲ್ಲಿಸೋಣ. ತಾವು ಸಹಕರಿಸಬೇಕು.

ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪೂರ್ವಭಾವಿ ಪ್ರಸ್ತಾವನೆ ಮಾಡಬೇಕು. ತಾವು ನಿಯಮ 191ರ ಕೆಳಗೆ ನೋಟೀಸ್ ಕೊಟ್ಟಿದ್ದೀರಿ. ಅದನ್ನು ತಾವು ಪ್ರಸ್ತಾಪ ಮಾಡಬಹುದು.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಒಂದು ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು : ಯಾವುದರ ಮೇಲೆ ಪಾಯಿಂಟ್ ಆಫ್ ಆರ್ಡರ್, ಹೇಳಿ ಪರವಾಗಿಲ್ಲ ತಾವು ಹೊಸ ಸದಸ್ಯರು.